ಈ ದಿನ ದಿನಾಂಕಃ 03.09.2025 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀಸವಾಲು ವಾದಿ ಪರ ಶ್ರೀ ಕೆ ಜಿ ಎಸ್ ವಕೀಲರಿಂದಃ**

ದಿಃ 08.04.2020 ರರಲ್ಲಿ ನನ್ನ ತಂದೆ ಮರಣ ಹೊಂದಿರುತ್ತಾರೆ. 2022 ನೇ ಸಾಲಿನಲ್ಲಿ ನ್ಯಾಯಾಲಯಕ್ಕೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಪ್ರಮಾಣ ಪತ್ರ ಸಲ್ಲಿಸುವ ಕಾಲಕ್ಕೆ ನನ್ನ ತಂದೆ ಮರಣ ಹೊಂದಿದ್ದರು ಎಂದರೆ ಸರಿ. ಹಾಗಾಗಿ ನನಗೆ ಬರೆದುಕೊಟ್ಟ ಮೊಕ್ತ್ಯಾರ್ ನಾಮೆ ರದ್ದಾಗಿತ್ತು ಎಂದರೆ ಸರಿಯಲ್ಲ. 1954 ನೇ ಸಾಲಿನಲ್ಲಿ ಖಾದರ್ ಖಾನ್ ರವರ ತಂದೆ ರಸೂಲ್ ಖಾನ್ ರವರು ದಾವಾ ಆಸ್ತಿಯನ್ನು ನಿಡಿ 1 ರಂತೆ ಕ್ರಯಕ್ಕೆ ಪಡೆದಿರುತ್ತಾರೆಂದರೆ ಸರಿ. ನನ್ನ ತಂದೆಯ ಅಕ್ಕನನ್ನು ವಾದಿಯ ತಂದೆ ರಸೂಲ್ ಖಾನ್ ರವರು ಮದುವೆಯಾಗಿರುತ್ತಾರೆ ಎಂದರೆ ಸರಿ. ಹಾಗಾಗಿ ನಾವು ಮತ್ತು ವಾದಿಗಳು ಸಂಬಂದಿಕರು ಎಂದರೆ ಸರಿ.

2. ನಮ್ಮ ಊರು ಹೊನ್ನಾಳಿ ತಾಲ್ಲೂಕಿನ ಹನುಮನಹಳ್ಳಿ ಗ್ರಾಮ ಎಂದರೆ ಸರಿ. ನನ್ನ ತಂದೆಯ ಆದಾರ್ ಕಾರ್ಡ್ ನ ವಿಳಾಸ ಹನುಮನಹಳ್ಳಿ ಗ್ರಾಮ ಎಂದರೆ ಸರಿ. ನಾವು ಹಾಗೂ ವಾದಿಗಳು ಸಂಬಂದಿಕರಾದ್ದರಿಂದ ವಾದಿಗಳು ಬಿಟ್ಟು ಹೋದ ಕ್ರಯಪತ್ರವನ್ನು ನಾನು ತೆಗೆದಿಟ್ಟರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಿಃ 19.02.1979 ನೇ ಸಾಲಿನಲ್ಲಿ ಕ್ರಯ ಕರಾರು ಪತ್ರವನ್ನು ರಸೂಲ್ ಖಾನ್ ಸಾಬ್ ರವರು ರೂ. 10,000/- ಕ್ಕೆ ಬರೆದು ಕೊಟ್ಟಿರುತ್ತಾರೆ. ರಸೂಲ್ ಖಾನ್ ಹಾಗೂ ಅವರ ಮಗ ನೊಂದಾಯಿತ ದಾಖಲೆಗಳ ಮೂಲಕ ಆಸ್ತಿಯನ್ನು ಪರಭಾರೆ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸೈಯದ್ ಖರೀಂ ಸಾಬ್ ರವರು ರಸೂಲ್ ಖಾನ್ ರವರಿಗೆ ಅಳಿಯನಾದ್ದರಿಂದ ನೊಂದಾಯಿತ ದಾಖಲೆಯನ್ನು ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. 3. ಪ್ರಸ್ತುತ ದಾವೆಯನ್ನು ಸಲ್ಲಿಸಿದ ನಂತರದಲ್ಲಿ ಪತ್ರದ ಪ್ರಕಾರ ಆಸ್ತಿಯನ್ನು ನೊಂದಾಯಿಸಿ ಕೊಡುವಂತೆ ಯಾವುದೇ ದಾವೆಯನ್ನು ವಿಷಯ ತಿಳಿದ ನಂತರ ಸಲ್ಲಿಸಿರುವುದಿಲ್ಲ. ಕ್ರಯ ಕರಾರು ಪತ್ರವನ್ನು ಈ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಕ್ರಯ ಕರಾರು ಪತ್ರದಲ್ಲಿನ ಸಂಗತಿಗಳನ್ನು ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಪರಭಾರೆಯಾದ



ಋಣಭಾರ ರಾಹಿತ್ಯ ದಾಖಲೆಯಲ್ಲಿ ನಮೂದಾಗುತ್ತದೆ ಎಂದರೆ ಸರಿ. ಯಾವುದೇ ದಾಖಲೆಗಳ ಆಧಾರವಿಲ್ಲದೆ ಪಂಚಾಯಿತಿ ಅಧಿಕಾರಗಳೊಂದಿಗೆ ಶಾಮಿಲ್ ಆಗಿ ದಾಖಲೆಗಳನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ವಿಚಾರ ತಿಳಿದ ನಂತರ ವಾದಿ ಪಂಚಾಯಿತಿಗೆ ಮೂಲ ದಾಖಲೆಗಳಂತೆ ಖಾತೆ ಬದಲಾವಣೆ ಮಾಡುವಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ.

4. ಪಂಚಾಯಿತಿಯವರು ಸಿವಿಲ್ ಸ್ವರೂಪದ ವ್ಯಾಜ್ಯ ಆಗಿರುವುದರಿಂದ ನ್ಯಾಯಾಲಯದಲ್ಲಿ ಇತ್ಯರ್ಥ ಮಾಡಿಕೊಳ್ಳುವಂತೆ ಸೂಚಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ವಾದಿ 1 ಮತ್ತು 2ನೇ ಪ್ರತಿವಾದಿಗಳ ವಿರುದ್ಧ

ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ.  ದಾವಾ ಆಸ್ತಿಗೆ ಸಂಬಂದಿಸಿದ ಯಾವುದೇ ದಾಖಲೆಗಳು ಇಲ್ಲದಿದ್ದರೂ ಹಾಗೂ ಹಕ್ಕು ಮತ್ತು ಸ್ವಾಧೀನ ಇಲ್ಲದಿದ್ದರೂ ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಮಾಲಿಕತ್ವವನ್ನು ರುಜುವಾತು ಪಡಿಸಿಸಲು ಕ್ರಯಕರಾರು  ಪತ್ರವನ್ನು ಹೊರತುಪಡಿಸಿ ನೊಂದಾಯಿತ ಕ್ರಯಪತ್ರವನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆಃ  ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

C/c 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ.ಚನ್ನಗಿರಿ.